ಸಂ.ಆರ್‌ಡಿ 158 ಟಿಎನ್‌ಆರ್ 2020 (ಭಾಗ)

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 04.06.2020

## ಆದೇಶ

ಕೇಂದ್ರ ಗೃಹ ಮಂತ್ರಾಲಯವು ಆದೇಶ ಸಂಖ್ಯೆ: 40-3/2020-ಡಿ.ಎಂ-I(ಎ), ದಿನಾಂಕ:30.05.2020ರಲ್ಲಿ ಕೋವಿಡ್-19 ಸೋಂಕು ಹರಡುವುದನ್ನು ತಡೆಗಟ್ಟಲು ಲಾಕ್‌ಡೌನ್ ಅನ್ನು ಕಂಟೈನ್‌ಮೆಂಟ್ ವಲಯಗಳಲ್ಲಿ ದಿನಾಂಕ:30.06.2020ರವರೆಗೆ ವಿಸ್ತರಿಸಿ ಹೊಸ ಮಾರ್ಗಸೂಚಿಯನ್ನು ಲಾಕ್‌ಡೌನ್ ತೆರವು ಆದೇಶ-1ರ ಸಂಬಂಧ ಹೊರಡಿಸಿದೆ. ಈ ಮಾರ್ಗಸೂಚಿಯಲ್ಲಿ ಹಂತವಾರು ನಿಷೇಧಿತ ಚಟುವಟಿಕೆಗಳನ್ನು ಆರಂಭಿಸಲು ಅನುವು ಮಾಡಿಕೊಡಲಾಗಿದೆ. ತತ್ಸಬಂಧ ರಾಜ್ಯ ಸರ್ಕಾರವು ಆದೇಶ ಸಂಖ್ಯೆ: ಆರ್‌ಡಿ 158 ಟಿಎನ್‌ಆರ್ 2020, ದಿನಾಂಕ:30.05.2020ರಲ್ಲಿ ಹೊಸ ಮಾರ್ಗಸೂಚಿಯನ್ನು ಲಾಕ್‌ಡೌನ್ ತೆರವು ಆದೇಶ-1ರ ಸಂಬಂಧ ಹೊರಡಿಸಿದೆ.

ಲಾಕ್‌ಡೌನ್ ತೆರವು ಆದೇಶ-1ರಲ್ಲಿ ಕೇಂದ್ರ ಗೃಹ ಮಂತ್ರಾಲಯವು ಮತ್ತು ರಾಜ್ಯ ಸರ್ಕಾರವು ಅಂತರ್ ರಾಜ್ಯ ಮತ್ತು ರಾಜ್ಯದೊಳಗಿನ ವ್ಯಕ್ತಿಗಳ ಸಂಚಾರ ಹಾಗೂ ಸರಕುಗಳ ಸಾಗಾಣಿಕೆಗೆ ಕೇಂದ್ರ ಹಾಗೂ ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಹೊರಡಿಸಿರುವ ಎಸ್‌ಓಪಿ ಯಲ್ಲಿನ ನಿಬಂಧನೆಗಳಿಗೆ ಒಳಪಟ್ಟಿದೆ.

ಅಂತೆಯೇ, ವಿಪತ್ತು ನಿರ್ವಹಣಾ ಕಾಯ್ದೆ 2005ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗೆ ಸಹಿ ಮಾಡಲಾದ ರಾಜ್ಯ ಕಾರ್ಯಕಾರಿ ಸಮಿತಿಯ ಅಧ್ಯಕ್ಷನಾದ ನಾನು ಕರ್ಫ್ಯೂ ಅವಧಿ ರಾತ್ರಿ 9.00 ಗಂಟೆಯಿಂದ ಬೆಳಿಗ್ಗೆ 5.00 ಗಂಟೆಯವರೆಗೆ ನಿಷೇಧಿಸಲ್ಪಟ್ಟ ಕೆ.ಎಸ್.ಆರ್.ಟಿ.ಸಿ./ ಎನ್.ಇ.ಕೆ.ಎಸ್.ಆರ್.ಟಿ.ಸಿ/ ಎನ್.ಡಬ್ಲ್ಯೂ.ಕೆ.ಎಸ್.ಆರ್.ಟಿ.ಸಿ. / ಬಿ.ಎಂ.ಟಿ.ಸಿ ಬಸ್‌ಗಳ ಸಂಚಾರಕ್ಕೆ ಹಾಗು ಅವುಗಳ ಪ್ರಯಾಣಿಕರು ಹೊಂದಿರುವಂತಹ ಬಸ್ ಟಿಕೇಟ್‌ಗಳ ಆಧಾರದ ಮೇಲೆ ಬಸ್ ನಿಲ್ದಾಣಗಳಿಗೆ ಹೋಗಲು ಮತ್ತು ಬಸ್ ನಿಲ್ದಾಣಗಳಿಂದ ಮನೆಗಳಿಗೆ ಹೋಗಲು ರಾಷ್ಟ್ರೀಯ ಕೋವಿಡ್-19 ನಿರ್ವಹಣೆ ನಿರ್ದೇಶನಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಹೊರಡಿಸಿರುವ ಎಸ್‌ಓಪಿ ಹಾಗೂ ಪ್ರಯಾಣದ ಕುರಿತು ಜಾರಿಗೆ ತರಲಾಗಿರುವ ಇತರೆ ಮಾರ್ಗಸೂಚಿಗಳಲ್ಲಿನ ನಿರ್ದೇಶನದಂತೆ ಅನುಮತಿಸಿದೆ.

ಮುಂದುವರೆದು, ಕರ್ಫ್ಯೂ ಅವಧಿಯಲ್ಲಿ ಆಟೋ, ಟ್ಯಾಕ್ಸಿ ಮತ್ತು ಕ್ಯಾಬ್‌ಗಳು ಪ್ರಯಾಣಿಕರನ್ನು ಬಸ್‌ಸ್ಟಾಂಡ್ /Pickup points ಪಿಕ್‌ಅಪ್ ಪಾಯಿಂಟ್ಸ್‌ಗಳಲ್ಲಿ ಕರೆದೊಯ್ಯಲು / ಕರೆತರಲು ಸಹ ಮೇಲಿನ ಮಾರ್ಗಸೂಚಿಯಲ್ಲಿನ ನಿಬಂಧನೆಗಳಿಗೊಳಪಟ್ಟು ಅನುಮತಿಸಿದೆ.

ಟಿಎಂವಿಜಯಭಾಸ್ಕರ್
(ಟಿ.ಎಂ. ವಿಜಯ್ ಭಾಸ್ಕರ್)
ಮುಖ್ಯ ಕಾರ್ಯದರ್ಶಿ ಹಾಗೂ
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ
ಕಾರ್ಯಕಾರಿ ಸಮಿತಿ ಅಧ್ಯಕ್ಷರು

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.